

# ಮದುವೆ ಮುಂದಕ್ಕೆ?

ದೀಪಿಕಾ ಪಡುಕೋಣೆ ಮತ್ತು ರಣ್‌ವೀರ್ ಸಿಂಗ್ ಮದುವೆ ನವೆಂಬರ್‌ನಲ್ಲಿ ಆಗುವುದು ಖಂಡಿತವೋ.. ಎನ್ನುವುದೀಗ ಬಾಲಿವುಡ್‌ನಲ್ಲಿ ಬಹುವಾಗಿ ಚರ್ಚೆಯಾಗುತ್ತಿರುವ ವಿಷಯ. ಪತ್ರಕರ್ತರ ಅಂದಾಜಿನ ಪ್ರಕಾರ, ನವೆಂಬರ್‌ನಲ್ಲಿ ಕೆಲವೇ ಕೆಲವು ಆಪ್ತೇಷ್ಟರ ಮಧ್ಯೆ ಇಟಲಿಯಲ್ಲಿ ಮದುವೆ. ಬಳಿಕ ಮುಂಬೈಯಲ್ಲೊಂದು ಭರ್ಜರಿ ಪಾರ್ಟಿ. ಆದರೆ ಈ ವಿಷಯವನ್ನು ದೀಪಿಕಾ ಆಗಲೀ, ರಣ್‌ವೀರ್ ಆಗಲೀ ಖಚಿತ ಪಡಿಸುತ್ತಿಲ್ಲ. ದೆಹಲಿಯಲ್ಲಿ ಇತ್ತೀಚೆಗೆ ಪತ್ರಕರ್ತರು ದೀಪಿಕಾಳಿಗೆ ನೇರವಾಗಿ, 'ಮದುವೆಯ ಬಗ್ಗೆ ಸ್ವಲ್ಪ ಕ್ಲೂ ಕೊಡಿ' ಎಂದು ಕೇಳಿದರೆ, 'ಮದುವೆಯ ಬಗ್ಗೆ ನಾನೇನೂ ಹೇಳುವುದಿಲ್ಲ' ಎಂದಿದ್ದಾಳೆ. ಅದರ ಬೆನ್ನಲ್ಲೇ ಕರಣ್ ಜೋಹರ್ ಕಾರ್ಯಕ್ರಮವೊಂದರಲ್ಲಿ 'ಶೀಘ್ರ ಮದುವೆ ಆಗುವುದು ನಿಜ– ಈ ಹೇಳಿಕೆಗೆ ಯೆಸ್ ಅಥವಾ ನೋ ಅನ್ನಿ' ಎಂಬ ಪ್ರಶ್ನೆ ಕೇಳಿದಾಗ, ದೀಪಿಕಾ 'ಯೆಸ್' ಅಂದಿದ್ದಾಳೆ. ಈ ಮಧ್ಯೆ ಮದುವೆಯ ದಿನಾಂಕ ಜನವರಿಗೆ ಮುಂದಕ್ಕೆ ಹೋಗಿದೆಯಂತೆ ಎನ್ನುವ ಸುದ್ದಿ ಹಬ್ಬಿದೆ. ಒಟ್ಟಾರೆ ಪತ್ರಕರ್ತರಿಗೆ ಕಣ್ತುಂಬ ಕನ್‌ಫ್ಯೂಷನ್ನು!

ಮುಂದಿನ ಜನವರಿ 5ಕ್ಕೆ ದೀಪಿಕಾಗೆ 32 ತುಂಬಿ 33ಕ್ಕೆ ಕಾಲಿಡುತ್ತಿದ್ದಾಳೆ. ಮದುವೆ ಆಗಬೇಕಾದ ವಯಸ್ಸೇ. ವೃತ್ತಿಜೀವನದಲ್ಲೂ ವರ್ಷದ ಕೊನೆಗೆ ದೀಪಿಕಾ ಸ್ವಲ್ಪ ಬಿಡುವು ಮಾಡಿಕೊಂಡಿದ್ದಾಳೆ. ಕವಯಿತ್ರಿ ಅಮೃತಾ ಪ್ರೀತಂ ಜೀವನ ಆಧಾರಿತ 'ಸಪ್ನಾ ದೀದಿ' ಚಿತ್ರದ ಶೂಟಿಂಗ್ ಮುಗಿದಿದೆ. ರಜನಿಕಾಂತ್ ಜತೆ ನಟಿಸಲು ಒಪ್ಪಿಕೊಂಡ 'ರಾಣಾ' ಚಿತ್ರದ ಶೂಟಿಂಗ್ ಮುಂದಕ್ಕೆ ಹೋಗಿದ್ದು, ಮುಂದಿನ ವರ್ಷ ಮತ್ತೆ ಆರಂಭವಾಗಬಹುದು. 'ಲವ್ 4 ಎವರ್' ಎನ್ನುವ ಚಿತ್ರದ ಪ್ರಕಟಣೆಯಾದದ್ದು ಶೂಟಿಂಗ್ ಸದ್ಯಕ್ಕೆ ಇಲ್ಲ. ಹೀಗಾಗಿ ದೀಪಿಕಾ ವರ್ಷಾಂತ್ಯಕ್ಕೆ ಫ್ರೀ. ಇನ್ನೊಂದೆಡೆ ರಣ್‌ವೀರ್ ನಟಿಸುತ್ತಿರುವ ರೋಹಿತ್ ಶೆಟ್ಟಿಯ 'ಸಿಂಬಾ' ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ಡಿಸೆಂಬರ್ 26ರಂದು ಸಿನಿಮಾ ಬಿಡುಗಡೆಯ ಅಂದಾಜಿದೆ. ಆತನೂ ನವೆಂಬರ್‌ನಲ್ಲಿ ಫ್ರೀ ಅಂತೆ. ಹಾಗಾಗಿ ಮದುವೆಗೆ ಮುಹೂರ್ತವನ್ನು ಪತ್ರಕರ್ತರೇ ಫಿಕ್ಸ್ ಮಾಡಿದ್ದಾರೆ.

ಮದುವೆ ಯಾವತ್ತಾದರೂ ಆಗಲಿ, ಸಾಮಾಜಿಕ ಜಾಲತಾಣದಲ್ಲಿ ವಾರಕ್ಕೆರಡರಂತೆ ದೀಪಿಕಾ– ರಣ್‌ವೀರ್ ರಸಗಳಿಗೆಯ ಸಂಭ್ರಮದ ಫೋಟೋಗಳಂತೂ ತೆರೆ ಕಾಣುತ್ತಿವೆ! ಸುದ್ದಿಯಾಗುವ ಯಾವ ಅವಕಾಶವನ್ನೂ ಈ ಜೋಡಿ ಬಿಟ್ಟುಕೊಡುತ್ತಿಲ್ಲ.

# ತಾಪ್‌ಸೀ 'ಗರಂ'

'ಮನ್‌ಮರ್ಜಿಯಾಂ' ಚಿತ್ರದಲ್ಲಿ ಸರ್ದಾರ್ಜಿಯೊಬ್ಬ ಗುರುದ್ವಾರದ ಹೊರಗೆ ತನ್ನ ಪೇಟಾ ಕಳಚಿಟ್ಟು ಸಿಗರೇಟ್ ಸೇದುವ ದೃಶ್ಯಕ್ಕೆ ಪಂಜಾಬಿನಲ್ಲಿ ಸಿಟ್ಟಿನ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಿಖ್ ಧರ್ಮೀಯರ ಅವಹೇಳನ ನಡೆದಿದೆ ಎಂದು ಹಲವರು ಗುಲ್ಲೆಬ್ಬಿಸಿದ್ದಾರೆ. ನಿರ್ದೇಶಕ ಅನುರಾಗ್ ಕಾಶ್ಯಪ್ ಈ ದೃಶ್ಯಕ್ಕೆ ಕತ್ತರಿ ಹಾಕಿದ್ದಲ್ಲದೆ ಸಾಮಾಜಿಕ ಜಾಲತಾಣದಲ್ಲಿ ಕ್ಷಮೆಯನ್ನೂ ಕೇಳಿಯಾಗಿದೆ. ಚಿತ್ರದ ಹೀರೋಯಿನ್ ತಾಪ್ಸೀ ಪನ್ನು ಕೂಡಾ 'ಯಾರನ್ನೂ ನೋಯಿಸುವ ಉದ್ದೇಶ ಚಿತ್ರತಂಡಕ್ಕೆ ಇಲ್ಲ' ಎಂದು ಪ್ರತಿಕ್ರಿಯೆ ನೀಡಿದ್ದಾಳೆ.

ಆದರೆ ಜಾಲತಾಣಗಳಲ್ಲಿ ತಾಪ್ಸೀ ಹೇಳಿಕೆಯನ್ನು ಟ್ರೋಲ್ ಮಾಡಿ ಕೆಲವರು ಸಾಕಷ್ಟು ಕಿರಿಕಿರಿ ಉಂಟು ಮಾಡಿದ್ದಾರೆ. ಈ ಟ್ರೋಲ್‌ವಾಲಾಗಳಿಗೆ ಅಂಜದ ತಾಪ್ಸೀ, ಎಲ್ಲರಿಗೂ ಸೂಕ್ತ ಪ್ರತ್ಯುತ್ತರಗಳನ್ನು ಕೊಡುತ್ತಿದ್ದಾಳೆ. ಒಂದು ಹಂತದಲ್ಲಿ ಕಟುವಾಗಿ ಪ್ರತಿಕ್ರಿಯೆ ನೀಡಿರುವ ತಾಪ್ಸೀ, 'ನನ್ನ ಧರ್ಮ ಯಾವತ್ತೂ ಇನ್ನೊಬ್ಬರ ಭಾವನೆಗಳನ್ನು ಸೆನ್ಸಾರ್ ಮಾಡಲು ಹೇಳಿಕೊಟ್ಟಿಲ್ಲ. ಹೆಣ್ಣೊಬ್ಬಳು ಏನು ಯೋಚನೆ ಮಾಡಬೇಕು ಅಥವಾ ಮಾಡಬಾರದು ಎನ್ನುವುದನ್ನು ಹೇಳಲು ಈ ಸ್ವಯಂಘೋಷಿತ ಧರ್ಮ ರಕ್ಷಕರಿಗೆ ಅಧಿಕಾರ ಕೊಟ್ಟವರು ಯಾರು?' ಎಂದು ಕಿಡಿ ಕಾರಿದ್ದಾಳೆ.

ಹಾಗೆ ನೋಡಿದರೆ, ತಾಪ್ಸೀಗೆ ಇಂತಹ ರಗಳೆಗಳಲ್ಲಿ ತೊಡಗಿಸಿಕೊಳ್ಳುವಷ್ಟು ಪುರುಸೊತ್ತೂ ಇಲ್ಲ. ಆಕೆಯ ಕೈತುಂಬ ಚಿತ್ರಗಳಿವೆ. ನವೆಂಬರ್‌ನಲ್ಲಿ ತಮಿಳಿನ 'ಕಾನ್' ಬಿಡುಗಡೆಯಾಗಬೇಕಿದೆ. ಡಿಸೆಂಬರ್‌ನಲ್ಲಿ ನಾನಾ ಪಾಟೇಕರ್ ಜೊತೆಗೆ ನಟಿಸಿದ 'ತಡ್ಕಾ', ಜನವರಿಯಲ್ಲಿ 'ಬದ್ಲಾ', ಮಾರ್ಚ್‌ನಲ್ಲಿ 'ದಿಲ್ ಜಂಗ್ಲೀ – ಹೀಗೆ ಆಕೆ ನಟಿಸಿದ ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿವೆ.

■ ಬಿಂದು

